International Journal of Kannada Research
www.kannadajournal.com

ISSN: 2454–5813
IJKR 2021; 7(4): 226-229
© 2021 IJKR
www.kannadajournal.com
Received: 06-08-2021
Accepted: 10-09-2021

**ಡಾ. ಸರ್ವೇಶ ಬಿ.ಎಸ್**
ಮುಖ್ಯಸ್ಥರು, ಕನ್ನಡ ವಿಭಾಗ,
ಕ್ರಿಸ್ತು ಜಯಂತಿ ಕಾಲೇಜು ಸ್ವಾಯತ್ತ,
ಬೆಂಗಳೂರು, ಕರ್ನಾಟಕ, ಭಾರತ

**Corresponding Author:**
**ಡಾ. ಸರ್ವೇಶ ಬಿ.ಎಸ್**
ಮುಖ್ಯಸ್ಥರು, ಕನ್ನಡ ವಿಭಾಗ,
ಕ್ರಿಸ್ತು ಜಯಂತಿ ಕಾಲೇಜು ಸ್ವಾಯತ್ತ,
ಬೆಂಗಳೂರು, ಕರ್ನಾಟಕ, ಭಾರತ

# ಕುವೆಂಪು ಕಾವ್ಯದಲ್ಲಿ ಕರ್ನಾಟಕ ಏಕೀಕರಣ

**ಡಾ. ಸರ್ವೇಶ ಬಿ.ಎಸ್**

ಕರ್ನಾಟಕ ಏಕೀಕರಣದ ಹೋರಾಟ ಹಾಗೂ ಚಿಂತೆಗಳು ನಾವು ಇಂದು ಸಮಗ್ರ ಕರ್ನಾಟಕದ ನೆರಳಲ್ಲಿ ವಾಸಿಸುವಂತೆ ಮಾಡಿದೆ. ವಿಶಾಲ ಕರ್ನಾಟಕ ಅಥವಾ ಅಖಂಡ ಕರ್ನಾಟಕವೆಂಬು ಇಂದಿನ ಕಲ್ಪನೆ ಆರು ದಶಕಗಲ ಹಿಂದ ಸುಮಾರು ಇಪ್ಪತ್ತು ವಿವಿಧ ಪ್ರಾಂತ್ಯಗಳಲ್ಲಿ ಹರಿದು ಹಂಚಿಹೋಗಿತ್ತೆಂಬುದು ಸತ್ಯ. ಕನ್ನಡಿಗರಿಗೆ ಒಂದು ಪ್ರತ್ಯೇಕ ರಾಜ್ಯವೇ ಇರಲಿಲ್ಲವೆಂಬುದು ನಮಗೆ ನಂಬಲಸಾಧ್ಯವಾದ ಸಂಗತಿ. ಮೈಸೂರ ಸಂಸ್ಥಾನವನ್ನು ಹೊರತುಪಡಿಸಿ ಬೇರಾವ ಪ್ರಾಂತ್ಯಗಳಲ್ಲಿಯೂ ಕನ್ನಡಕ್ಕಾಗಲಿ, ಕನ್ನಡಿಗರಿಗಾಗಲಿ ಮಾನ್ಯತೆ ಇರಲಿಲ್ಲ. 1905ರಲ್ಲಿ ಬ್ರಿಟೀಶ್ ಸರ್ಕಾರ ಪ್ರಸ್ತಾಪಿಸಿದ ಬಂಗಾಳ ರಾಜ್ಯದ ವಿಭಜನೆಯ ಕಾವು 'ವಂಗಭಂಗ' ಚಳುವಳಿಗೆ ಕಾರಣವಾಯಿತು. ಆ ಹೋರಾಟದ ತೀವ್ರತೆಯನ್ನು ಅರಿತು 1912ರಲ್ಲಿ ಬಂಗಾಳವನ್ನು ಒಂದು ಮಾಡಿ ಸಮಗ್ರ ಬಂಗಾಳದ ರಾಜ್ಯವನ್ನು ರೂಪಿಸಿತು. ಈ ಚಳುವಳಿ ಒಂದು ರೀತಿಯಲ್ಲಿ ಕನ್ನಡವನ್ನೇ ಮಾತನಾಡುತ್ತಿದ್ದ ಜನರಲ್ಲಿ ಹೊಸ ಉತ್ಸಾಹವನ್ನು ಮೂಡಿಸಿತು. ತನ್ಮೂಲಕ ಏಕೀಕರಣ ಕರ್ನಾಟಕದ ಕನಸು ಕಾಣಲು, ಅದರ ಹೋರಾಟಕ್ಕೆ ಸಿದ್ದವಾಗಲು ಮನಸು ಮಾಡಿತು.

1890ರಲ್ಲಿ ಕನ್ನಡಿಗರನ್ನು ಒಗ್ಗೂಡಿಸಲು ರಾ.ಹ. ದೇಶಪಾಂಡೆಯವರ ನೇತೃತ್ವದಲ್ಲಿ ಪ್ರಾರಂಭವಾದ ದಾರವಾಡದ ವಿದ್ಯಾವರ್ಧಕ ಸಂಘದ ಪಾತ್ರವನ್ನು ಮರೆಯುವಂತಿಲ್ಲ. ಕನ್ನಡ ಶಿಕ್ಷಣ ಪ್ರಸಾರಕ್ಕೆ ನೀಡಿದ ಪ್ರೋತ್ಸಾಹ, ಪ್ರಾಚೀನ ಕನ್ನಡ ಕೃತಿಗಳ ಸಂಪಾದನೆ ಹಾಗೂ ಪ್ರಕಟಣೆ, ಸ್ವತಂತ್ರ ಕೃತಿಗಳ ರಚನೆ, ಉತ್ತಮ ಹಾಗೂ ಉಪಯುಕ್ತ ಕೃತಿಗಳ ಅನುವಾದ, ಗ್ರಂಥಭಂಡಾರಗಳ ಸ್ಥಾಪನೆ ಹೀಗೆ ಹತ್ತು ಹಲವು ಸಾಹಿತ್ಯಾತ್ಮಕ ಕಲೆಸಗಳನ್ನು ಮಾಡುತ್ತಾ ಜನರಲ್ಲಿ ಜಾಗೃತಿ ಮಾಡುವ ಕೆಲಸವನ್ನು ಮಾಡತೊಡಗಿತು. 1915ರಲ್ಲಿ ಸ್ಥಾಪನೆಯಾದ ಕರ್ನಾಟಕ ಸಾಹಿತ್ಯ ಪರಿಷತ್ತು ಮುಂದೆ ಕನ್ನಡ ಸಾಹಿತ್ಯ ಪರಿಷತ್ತು ಆಗಿ ಬದಲಾಗಿ ಸಮ್ಮೇಳನಗಳ ಮೂಲಕ ಏಕೀಕರಣದ ಬೇಡಿಕೆಗಳಿಗೆ ವೇದಿಕೆ ಮಾಡಿಕೊಟ್ಟಿತ್ತು. ಜೊತೆಗೆ 1916ರಲ್ಲಿ ಆಲೂರು ವೆಂಕಟರಾಯರು, ಗದಿಂಗೆಯ್ಯ ಹೊನ್ನಾಪುರಮಠ ಮತ್ತು ಕಡಪಾ ರಾಘವೇಂದ್ರರಾಯರು ಕಟ್ಟಿದ 'ಕರ್ನಾಟಕ ಸಭೆ' ಏಕೀಕರಣಡ ಕೂಗಿಗೆ ಬುಲುದೊಡ್ಡ ಶಕ್ತಿ ನೀಡಿತು. ಒಗ್ಗಟ್ಟಿನಿಂದ ನಡೆದ ಹೋರಾಟಗಳು, ನಾಡಹಬ್ಬಗಳು ಎಲ್ಲರಲ್ಲಿಯೂ ಉತ್ಸಾಹವನ್ನು ಮುಡಿಸಿದವು.

ಏಕೀಕರಣದ ವೇದಿಯಾಗಿದ್ದ ಬೆಳಗಾವಿಯಲ್ಲಿ ಮಹಾತ್ಮಾ ಗಾಂಧಿಯವರ ಅಧ್ಯಕ್ಷತೆಯಲ್ಲಿ 1924ರಲ್ಲಿ ನಡೆದ ರಾಷ್ಟ್ರೀಯ ಕಾಂಗ್ರೆಸ ಮಾಹಾಧಿವೇಶನದ ಸಂದರ್ಭದಲ್ಲಿ ಹುಯಿಲಗೋಳ ನಾರಾಯಣರಾಯರು ರಚಿಸಿದ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಗೀತೆಯನ್ನು ಮೊದಲ ಬಾರಿಗೆ ಹಾಡಲಾಯಿತು. ರಾಜಕೀಯವಾಗಿ, ಸಾಹಿತ್ಯಾತ್ಮಕವಾಗಿ ಕನ್ನಡ ನಾಡಿಗಾಗಿ ಹೋರಾಟಗಳು, ಚರ್ಚೆಗಳು ನಡೆಯುತ್ತಲೇ ಬರುತ್ತಿದ್ದವು. ಬ್ರಿಟೀಷ್ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸುತ್ತಿದ್ದರೂ ಕೂಡ ತೀರ್ಮಾನವನ್ನು ಕೈಗೊಳ್ಳದೆ ಕನ್ನಡಿಗರ ತಾಳ್ಮೆಯನ್ನು ಪರೀಕ್ಷಿಸುತ್ತಲೇ ಇತ್ತು. ಭಾಷಾವಾರು ಪ್ರಾಂತ್ಯಗಳಾಗಿಸುವುದರಿಂದ ಸರ್ಕಾರದ ಆಳ್ವಿಕೆಗೆ ಅನುಕೂಲವಾಗಿದ್ದರಿಂದ ಹಾಗೇ ಯೋಚಿಸುತ್ತಿದ್ದುದು ನಿಜವೂ ಸರಿ.

ಏಕೀಕರಣದ ಹೋರಾಟದಲ್ಲಿ ಜನಜಾಗೃತಿ ಮೂಡಿಸುವ ಕೆಲಸವನ್ನು ಸಾಹಿತಿಗಳು, ಹಾಡುಗಾರರು ಬಹಳ ಮುಖ್ಯ ಕೆಲಸವನ್ನು ಮಾಡುತ್ತಿದ್ದರು. ಹುಯಿಲುಗೋಳ ನಾರಾಯಣರಾರು ರಚಿಸಿದ 'ಉದಯವಾಗಲಿ ನಮ್ಮ ಚೆಲವು ಕನ್ನಡ ನಾಡು' ಪ್ರೇರಕ ಬಿಂದುವೆಂದು ಹೇಳಬಹುದು. ಧಾರವಾಡದ ವಿದ್ಯಾವರ್ಧಕ ಸಂಘ ನಿರ್ವಹಿಸಿದ ಕೆಲಸ ಇಡೀ ಕನ್ನಡಿಗರನ್ನು ಒಂದು ಸೂರಿನೆಡೆಗೆ ತರಲು ಸಹಕಾರಿಯಾಯಿತು. ಜೊತೆಗೆ ಕನ್ನಡ ಸಾಹಿತ್ಯ ಪರಿಷತ್ತು ಕೂಡ ಏಕೀಕರಣ ಹೋರಾಟಕ್ಕೆ ಅನುಕೂಲವಾಗುವಹಾಗೆ ಸಾಹಿತ್ಯಾತ್ಮಕ ಚಿಂತನೆಗಳನ್ನು ಜನರಿಗೆ ತಲುಪಿಸುವ ಕೆಲಸವನ್ನು ಮಾಡಿತು.

ಆ ಕಾಲಕ್ಕೆ ಬಿ.ಎಂ.ಶ್ರೀ.ಯವರಿಂದ ಪ್ರೇರಣೆ ಪಡೆದು ಸಾಹಿತ್ಯದ ವಿದ್ಯಾರ್ಥಿಯಾಗಿದ್ದ ಪುಟ್ಟಪ್ಪನವರು ಏಕೀಕರಣದ ನೆಲೆಯಲ್ಲಿ ಚಿಂತಿಸಿರುವುದು ಸರಿಯಷ್ಟೆ. ಶ್ರೇಷ್ಠ ಪ್ರಕೃತಿ ಆರಾಧಕರಾಗಿ, ತಾತ್ವಿಕ ಚಿಂತನೆಗಳೊಂದಿಗೆ ಬೆಳೆದ ಕುವೆಂಪು ಅವರು ಪ್ರಾರಂಭದಿಂದಲೇ ಅವರ ಬರವಣಿಗೆ ಹಾಗೂ ಚಿಂತನೆಗಳೊಂದಿಗೆ ಕನ್ನಡ ಅಭಿಮಾನವನ್ನು ಉಳಿಸಿ ಬೆಳೆಸಿಕೊಂಡವರು.

ಇಪ್ಪತ್ತನೇ ಶತಮಾನದ ಎರಡು ಮೂರನೇ ದಶಕದಲ್ಲಿ ರಚನೆಯಾದ ನಾಡಗೀತೆ 'ಜೈ ಭಾರತ ಜನನಿಯ ತನುಜಾತೆ' ಕವಿತೆಯಲ್ಲಿ ಕವಿ ಕುವೆಂಪು ಅವರು ಚಿತ್ರಿಸಿರುವ ಸಮಗ್ರತೆಯ ಅಂಶಗಳನ್ನು ಗಮನಿಸಿದರೆ ಕುವೆಂಪು ಅವರಿಗಿದ್ದ ಕನ್ನಡ ಹಾಗೂ ಕರ್ನಾಟಕದ ಕಲ್ಪನೆ ನಮಗೆ ಸ್ಪಷ್ಟವಾಗುತ್ತದೆ. ಕೇವಲ ಹೋರಾಟದ ನೆಲೆಯಲ್ಲಿ ಕರ್ನಾಟಕ ಏಕೀಕರಣದ ಚಿಂತನೆಯನ್ನು ಮಾಡದ ಕುವೆಂಪು ಅವರು ಒಂದಷ್ಟು ಮುನ್ನೋಟದ ಕಲ್ಪನೆಯಲ್ಲಿ ಕರ್ನಾಟಕ ಹೇಗೆ ವಿಶೇಷ ಎಂವುದನ್ನು ಚಿತ್ರಿಸಿ ಒಂದು ಸ್ಪಷ್ಟ ಚಿತ್ರಣವನ್ನು ಎಲ್ಲರಿಗು ರವಾನಿಸಿದರು.

ಭೂದೇವಿಯ ಮಕುಟದ ನವಮಣಿಯೆ,
ಗಂಧದ ಚಂದದ ಹೊನ್ನಿನ ಗಣಿಯೆ;
ರಾಘವ ಮಧುಸೂದನರವತರಿಸಿದ
ಭಾರತ ಜನನಿಯ ತನುಜಾತೆ !

ಕರ್ನಾಟಕವು ಈ ಭೂದೇವಿಯ ಮುಕುಟಕ್ಕಿರುವ ಮಣಿ ಎಂದು, ಇದು ಗಂಧ, ಚಂದನ, ಬಂಗಾರದ ಗಣಿಯೆಂದು ಇದು ನಮ್ಮ ನೆಲೆಯೆಂಬುದನ್ನು ಅತ್ಯಂತ ನಿಖರವಾಗಿ ದಾಖಲಿಸುತ್ತಾರೆ ಕವಿ ಕುವೆಂಪು.

ತೈಲಪ ಹೊಯ್ಸಳರಾಳಿದ ನಾಡೇ,
ಡಂಕಣ ಜಕಣರ ನೆಚ್ಚಿನ ಬೀಡೆ
ಕೃಷ್ಣ ಶರಾವತಿ ತುಂಗಾ,
ಕಾವೇರಿಯ ವರ ರಂಗಾ
ಚೈತನ್ಯ ಪರಮಹಂಸ ವಿವೇಕರ,

ಈ ನಾಡನ್ನು ಎಂತಹ ಮಹಾನ್ ರಾಜವಂಶಗಳು ಆಳ್ವಿಕೆ ಮಾಡಿವೆ ಎಂಬುದನ್ನು ಇಲ್ಲಿ ಚಿತ್ರಿಸಲಾಗಿದೆ. ಸಮೃದ್ಧತೆಯನ್ನು ತೋರುವ ನದಿಗಳ ವಿವರಗಳೊಂದಿಗೆ ಎಲ್ಲರನ್ನೂ ಒಗ್ಗೂಡಿಸುವ ಕೆಲಸವನ್ನು ಈ ಕವಿತೆ ಹೇಳುತ್ತದೆ.

ಶಂಕರ ರಾಮಾನುಜ ವಿದ್ಯಾರಣ್ಯ,
ಬಸವೇಶ್ವರ ಮಧ್ವರ ದಿವ್ಯಾರಣ್ಯ,
ರನ್ನ ಷಡಕ್ಷರಿ ಪೊನ್ನ,
ಪಂಪ ಲಕುಮಿಪತಿ ಜನ್ನ
ಕುಮಾರವ್ಯಾಸರ ಮಂಗಳಧಾಮ,
ಕವಿ ಕೋಗಿಲೆಗಳ ಪುಣ್ಯಾರಾಮ

ನಾನಕ ರಾಮಾ ನಂದ ಕಬೀರರ

ಕನ್ನಡ ನೆಲದ ಮೇಲೆ ಪ್ರಭಾವ ಬೀರಿರುವ ಕವಿ ಸಂತರ ವಿವರಗಳನ್ನು, ಪಂಥಗಳ ಮಹತ್ವವನ್ನು ಮರೆಯದೇ ಸಾರಿರುವುದನ್ನು ಇಲ್ಲಿ ಕಾಣಬಹುದು. ಆದಿ ಕವಿ ಪಂಪನಿಂದ ಮೊದಲುಗೊಂಡು ಕನ್ನಡ ಸಾಹಿತ್ಯಕ್ಕೆ ಕೊಡುಗೆ ನೀಡಿರುವ ಎಲ್ಲರನ್ನೂ ನೆನೆಯುತ್ತಾರೆ. ಬದುಕಿನ ಪ್ರಾಮುಖ್ಯತೆಯನ್ನು ವಿವರಿಸುವ ಶಂಕರರು, ರಾಮಾನುಜಾಚಾರ್ಯರು, ಬಸವಣ್ಣ, ಮಧ್ವಾಚಾರ್ಯರು, ವಿದ್ಯಾರಣ್ಯರು ಎಲ್ಲರ ಪತ್ರವನ್ನು ಇಲ್ಲಿ ಗುರುತಿಸಲಾಗಿದೆ. ಮೌನ ಹೋರಾಟ ಹಾಗೂ ಕಾವ್ಯ ಹೋರಾಟವೆನ್ನುವ ಹಾಗೆ ರಚಿತವಾಗಿರುವ ಈ ನಾಡಗೀತೆ ನಮ್ಮಲ್ಲಿನ ಕನ್ನಡತನವನ್ನು ಬಡಿದೆಬ್ಬಿಸುವುದರ ಜೊತೆಗೆ ಒಗ್ಗಟ್ಟನ್ನು ಮೂಡಿಸುವ ಕೆಲಸ ಮಾಡುತ್ತದೆ.

ಸರ್ವ ಜನಾಂಗದ ಶಾಂತಿಯ ತೋಟ,
ರಸಿಕರ ಕಂಗಳ ಸೆಳೆಯುವ ನೋಟ
ಹಿಂದೂ ಕ್ರೈಸ್ತ ಮುಸಲ್ಮಾನ,
ಪಾರಸಿಕ ಜೈನರುದ್ಯಾನ,
ಜನಕನ ಹೋಲುವ ದೊರೆಗಳ ಧಾಮ,
ಗಾಯಕ ವೈಣಿಕರಾರಾಮ
ಕನ್ನಡ ನುಡಿ ಕುಣಿದಾಡುವ ಗೇಹ,
ಕನ್ನಡ ತಾಯಿಯ ಮಕ್ಕಳ ದೇಹ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ
ಜಯ ಸುಂದರ ನದಿ ವನಗಳ ನಾಡೇ,
ಜಯ ಹೇ ರಸಋುಷಿಗಳ ಬೀಡೆ!

ಕನ್ನಡ ನೆಲವೆಂಬುದು ಎಲ್ಲರದ್ದೂ ಹೌದೆಂಬ ಅಂಶವನ್ನು ಈ ಸಾಲುಗಳಲ್ಲಿ ಕವಿ ಕುವೆಂಪು ವರ್ಣಿಸಿದ್ದಾರೆ. ಇದರೊಂದಿಗೆ ಎಲ್ಲರೂ ನಮ್ಮ ಭಾಷೆ ಹಾಗೂ ನಾಡಿಗಾಗಿ ಹೋರಾಡಬೇಕೆಂಬುದನ್ನು ತೋರಿಸಿಕೊಟ್ಟಿದ್ದಾರೆ. ಹಿಂದೂ, ಕ್ರೈಸ್ತ, ಮುಸಲ್ಮಾನ, ಪಾರಸಿಕರು, ಜೈನರು ಎಲ್ಲರೂ ನೆಲೆಸಿರುವ ಈ ನೆಲಕ್ಕೆ ಕರ್ನಾಟಕ ಮಾತೆ ಎಂಬುದರಲ್ಲಿ ಯಾವ ಸಂಕೋಚವೂ ಇಲ್ಲವೆಂಬುದನ್ನು ಸೂಚಿಸಲಾಗಿದೆ.

'ಬಾರಿಸು ಕನ್ನಡ ಡಿಂಡಮವ' ಕವಿತೆಯಂತೂ ಅದು ನಡೆಯುವ ನಡಿಗೆಯಲ್ಲಿಯೇ ಓದುಗರನ್ನ ಆಕರ್ಷಿಸಿಬಿಡುತ್ತದೆ. ಜೊತೆಗೆ ಕುವೆಂಪು ಕನ್ನಡ ಪ್ರೇಮಿಗಳನ್ನು ಹೇಗೆ ಹುರಿದುಂಬಿಸುತ್ತಿದ್ದರೆಂದು ತಿಳಿಯುತ್ತದೆ. ಕನ್ನಡ ನಮ್ಮ ಹೃದಯಾಂತರಾಳದಲ್ಲಿ ಶಿವನ ಹಾಗೆ ದೃಢವಾಗಿದೆ ಎಂಬುದನ್ನು ತಿಳಿಸುತ್ತದೆ. ಭಾಷೆ ಹಾಗೂ ಈ ನೆಲದ ಬಗ್ಗೆ ಅಭಿಮಾನವಿಲ್ಲದೆ ಸತ್ತಂತೆ ಇರುವ ಜನರನ್ನ ಬಡಿದೆಚ್ಚರಿಸಬೇಕೆಂದು ಅವರು ನೀಡುವ ಕರೆ ರೋಮಾಂಚನಗೊಳಿಸುತ್ತದೆ. ನಮ್ಮಲ್ಲಿಯೇ ಸಣ್ಣ ಪುಟ್ಟದಕ್ಕೆ ಕಚ್ಚಾಡಿಕೊಂಡು ಹಾಳಾಗದೆ ಒಗ್ಗಟ್ಟಿನ ಮಂತ್ರವನ್ನು ಜಪಿಸಬೇಕಾಗಿದೆ ಎನ್ನುತ್ತಾರೆ. ಇದರೊಟ್ಟಿಗೆ ಮೂಢತ್ವದಲ್ಲಿರುವ ನಮ್ಮ ಮತಿಗಳನ್ನು ಹೇಗೆ ತೀಕ್ಷ್ಣಗೊಳಿಸಿಕೊಳ್ಳಬೇಕೆಂಬುದನ್ನು ತಿಳಿಸುತ್ತಾರೆ. ಇಡೀ

ಪದ್ಯದಲ್ಲಿ ಕವಿ ಕುವೆಂಪು ಅವರು ಸರ್ವೋದಯ ತತ್ವವನ್ನು ತಿಳಿಸುತ್ತಾ ಡಮರುಗವನ್ನು ಬಾರಿಸಿ ಕನ್ನಡಿಗರನ್ನು ಎಚ್ಚರಿಸುವ ಕೆಲಸವನ್ನು ಮಾಡುತ್ತಾರೆ.

ಸತ್ತಂತಿಹರನು ಬಡಿದೆಚ್ಚರಿಸು;
ಕಚ್ಚಾಡುವರನು ಕೂಡಿಸಿ ಒಲಿಸು.
ಹೊಟ್ಟೆಯಕಿಚ್ಚಿಗೆ ಕಣ್ಣೀರ್ ಸುರಿಸು;
ಒಟ್ಟಿಗೆ ಬಾಳುವ ತೆರದಲಿ ಹರಸು!

ಡಾ. ರಾಜ್ ಕುಮಾರ್ ಅವರು ಹಾಡಿರುವ 'ಎಲ್ಲಾದರು ಎಂತಾದರು ಇರು ಎಂದೆಂದಿಗು ನೀ ಕನ್ನಡವಾಗಿರು, ಕನ್ನಡವೇ ಸತ್ಯ, ಕನ್ನಡವೇ ನಿತ್ಯ' ಎಂಬ ಕವಿ ಕುವೆಂಪು ಅವರ ಕವಿತೆಯಂತೂ ಮೈರೆಸುತ್ತದೆ. ನಮ್ಮ ಬದುಕಿನ ಭಾಗವಾಗಿರುವ ಕನ್ನಡವನ್ನು ನಾವು ಪ್ರೀತಿಸಬೇಕಾಗಿರುವ ಕ್ರಮವನ್ನು ಈ ಹಾಡು ನಮಗೆ ಪರಿಚಯಿಸುತ್ತದೆ. ಕನ್ನಡ ನಾಡಿನ ಪ್ರಾಕೃತಿಕ ಮಹಿಮೆಯನ್ನು ತಿಳಿಸುತ್ತಾ, ಇಲ್ಲಿ ನೆಲೆಸಿ ಕನ್ನಡವನ್ನು ಶ್ರೀಮಂತಗೊಳಿಸಿದ ಕವಿ ಋಷಿಗಳನ್ನು ನೆನೆಯುತ್ತಾರೆ. ಅವರನ್ನು ಓದುವ, ಅವರ ಬಗ್ಗೆ ತಿಳಿದುಕೊಳ್ಳುವುದು ಎಷ್ಟು ಶ್ರೇಷ್ಠ ಕೆಲಸವೆಂಬುದನ್ನು ತಿಳಿಸಲಾಗಿದೆ.

ಹಾಳಾಗಿಹ ಹಂಪೆಗೆ ಕೊರಗುವ ಮನ,
ಪೆಂಪಿನ ಬನವಾಸಿಗೆ ಕರಗುವ ಮನ;
ಬೆಳ್ಗೊಳ ಬೇಲೂರ್ಗಳ ನೆನೆಯುವ ಮನ,
ಜೋಗದ ಜಲಪಾತದಿ ಧುಮುಕುವ ಮನ
ಮಲೆನಾಡಿಗೆ ಹೊಂಪುಳಿವೋಗುವ ಮನ;
ಎಲ್ಲಿದ್ದರೆ ಏನ್? ಎಂತಿದ್ದರೆ ಏನ್?
ಎಂದೆಂದಿಗು ತಾನ್–
ಕನ್ನಡವೇ ಸತ್ಯ!
ಕನ್ನಡವೇ ನಿತ್ಯ!

ನಮ್ಮ ಹಿರಿಮೆಯನ್ನು ಹೊಗಳುವ ಜೊತೆಗೆ ಇತಿಹಾಸದ ಕ್ರೈರತ್ವಕ್ಕೆ ಕರಗಿದ ಕನ್ನಡ ನಾಡಿನ ಪಾರಂಪರಿಕ ನೆಲೆಗಳನ್ನು ನೆನಪಿಸುವ ಕವಿ ನಮ್ಮೊಳಗಿನ ಭಾವನಾತ್ಮಕ ಬಳ್ಳಿಯನ್ನು ಚಿಗುರಿಸುತ್ತಾರೆ. ಬೇಲೂರು, ಹಳೇಬೀಡು, ಶ್ರವಣಬೆಳಗೊಳ ಹೀಗೆ ನಾಡಿನ ಉದ್ದಗಲಕ್ಕು ಹರಡಿರುವ ನಮ್ಮ ಶಿಲ್ಪಕಲೆಯ ವೈಭವವನ್ನು ನೆನೆಯುತ್ತಾ ನಾವು ಎಲ್ಲಿದ್ದರೂ, ಹೇಗಿದ್ದರೂ ಕನ್ನಡವೇ ಬದುಕಾಗಿಸಿಕೊಳ್ಳಬೇಕಾದ ಬಗೆಯನ್ನು ಕವಿ ಕುವೆಂಪು ಚಿತ್ರಿಸಿದ್ದಾರೆ. ಕೇವಲ ಕವಿತೆಯಾಗಿಸುವುದರ ಜೊತೆಗೆ ಅವರ ಕವಿಗೆಗಳು ನಾಡಿಗೆ ಹಾಡಿನ ಮೂಲಕ ತಲುಪಿದ್ದು ಒಂದು ವಿಶೇಷವೇ ಎನ್ನಬಹುದು. ಜನಸಾಮಾನ್ಯರಲ್ಲಿಯೂ ನಮ್ಮದ ಒಂದೇ ನಾಡಿ ಎಂಬ ಕಲ್ಪನೆಯನ್ನು ಗಟ್ಟಿಯಾಗಿಸಲು ಸಹಾಯಕವಾದ ಕಾವ್ಯ ಹೋರಾಟವಿದು.

"ಸಾಯುತಿದೆ ನಿಮ್ಮ ನುಡಿ ಓ ಕನ್ನಡದ ಕಂದರಿರ
ಸಾಯುತಿದೆ ನಿಮ್ಮ ನುಡಿ ಕನ್ನಡದ ಕಂದರಿರ" – ಎನ್ನುತ್ತಾ ಕನ್ನಡಿಗರನ್ನ ಭಾಷಾ ರಕ್ಷಣೆ ಹಾಗೂ ನಾಡ ರಕ್ಷಣೆಗೆ ಉರಿಗೊಳಿಸಿದ ಕವಿಯ ರೀತಿ ವಿಶೇಷವಾದದ್ದು. ತಾಯಿ ನುಡಿಯ ಕಲಿಕೆ ಹಾಗೂ ಬಳಕೆಯ ಪ್ರಾಮುಖ್ಯತೆಯನ್ನು ಹೇಳುತ್ತಾ ಅನ್ಯ ಭಾಷೆಗಳ ಪ್ರಭಾವವನ್ನು ಸಾರಾ ಸಗಟಾಗಿ ತಿರಸ್ಕರಿವ ಕೆಲಸವನ್ನು ಈ ಕವಿತೆ ಮಾಡಿದೆ. ಹಿಂದೆ ಹೇರಿಕೆ, ಆಂಗ್ಲ ಭಾಷೆಯ ಹೇರಿಕೆ, ಸಂಸ್ಕೃತಿಯ ಹೇರಿಕೆ ಹೀಗೆ ನಾನಾ ಹೇರಿಕೆಗಳ ಭಾರದಿಂದಲೂ ನಾವು ಹೇಗೆ ಕನ್ನಡವನ್ನು ಕಟ್ಟಬೇಕಾಗಿದೆ ಎಂಬುದನ್ನು ಈ ಕವಿತೆ ಸಾರಿ ಹೇಳುತ್ತದೆ. ಕೇವಲ ಏಕೀಕರಣದ ಕಾಲದಲ್ಲಿ ಮಾತ್ರವಲ್ಲದೆ ಏಕೀಕರಣಗೊಂಡು ಇಷ್ಟು ವರ್ಷಗಳ ನಂತರವೂ ಈ ಕವಿತೆಯ ಸಾಲುಗಳು ಪ್ರಸ್ತುತ ಸನ್ನಿವೇಶಕ್ಕೆ ಹೊಂದುತ್ತವೆಂದರೆ ನಾವು ಯೋಚಿಸಬೇಕಾದ ಸಂಗತಿಗಳು ಬಹಳಷ್ಟಿವೆ. ಕಟ್ಟಬೇಕಿದೆ ಕನ್ನಡವನ್ನು ಮಹತ್ತರ ಆಶಯಗಳೊಂದಿಗೆ.

ಹಲವು ವರ್ಷಗಳ ಹೋರಾಟದ ಫಲವಾಗಿ ಸಫಲವಾದ ಉದ್ದೇಶಕ್ಕೆ ಕನ್ನಡಿಯಂತೆ ಕವಿ ಕುವೆಂಪು ಅವರು ರಚಿರುವ ಈ ಕವಿತೆ ವಿಶೇಷತೆಯನ್ನು ಪಡೆಯುತ್ತದೆ.

"ಕನಸು ನನಸಾಗುತಿದೆ ಏಕೈಕ ಕರ್ನಾಟಕ:
ಕಣ್ ನಟ್ಟು ಬಯಸಿ ಕಾಣ್ ದಿಕ್ ತಟಧ್ವಜಪಟ!"

ಇಲ್ಲಿ ಕುವೆಂಪು ಅವರು ಬಳಸುವ ಏಕೈಕ ಕರ್ನಾಟಕ ಎಂಬುದು ಏಕೀಕರಣಗೊಂಡ ಕರ್ನಾಟಕದ ಕಲ್ಪನೆಯನ್ನು ಕಣ್ಣ ಮುಂದೆ ತರುತ್ತದೆ. ಹಲವು ವರ್ಷಗಳ ಹೋರಾಟಕ್ಕೆ ಸಿಕ್ಕ ಫಲವನ್ನು ಆನಂದಿಸುವ, ಆಸ್ವಾದಿಸುವ ಕಾಲಕ್ಕೆ ಪ್ರತಿಯೊಬ್ಬ ಕನ್ನಡಿಗನ ಎದೆಯಲ್ಲಿ ಉಂಟಾಗುವ ಆನಂದವನ್ನು ಇಲ್ಲಿ ಚಿತ್ರಿಸಲಾಗಿದೆ. 'ಕಣ್ ನಟ್ಟು ಬಯಸಿ ಕಾಣ್' ಎಂಬಲ್ಲಿ ನಮ್ಮ ಇಂಟೆನ್ಸಿಟಿ ಅಭಿವ್ಯಕ್ತವಾಗುತ್ತದೆ.

"ನವ ಯೌವನದ ಮೊದಲ ನವವಧೂವರರಂತೆ;
ನವಕವಿಯ ನವರಸ ನವೀನ ಕೃತಿಯಂತೆ,
ದಿವ್ಯ ವೀಣಾಗಾನ ಗತಿಯಂತೆ"

ಹೊಸ ಕನ್ನಡ ನಾಡು ರೂಪುಗೊಳ್ಳುತ್ತಿರುವ ರೀತಿಯನ್ನು ಮೇಲಿನ ಸಾಲುಗಳಲ್ಲಿ ಸಂಗ್ರಹಿಸುತ್ತಾರೆ. ನವ ಯೌವನದ ನವವಧು, ನವಕವಿಯ ನವೀನ ಕೃತಿ, ದಿವ್ಯ ವೀಣಾಗಾನ– ಇವೆಲ್ಲವೂ ಹೊಸತನದ ಆಗಮನವನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ಹೊಸ ನಾಡಿನ ಆನಂದವನ್ನು ಕವಿ ವರ್ಣಿಸುವ ರೀತಿ ಹೀಗೆ.

"ಕನ್ನಡದ ಮಕ್ಕಳಿರ, ಬನ್ನಿರೈ ಓ ಬನ್ನಿ;
ತನ್ನತನದನಿತನೂ ನಿವೇದಿಸಲು ತನ್ನಿ;"

ಗೆದ್ದ ಗೆಲುವನ್ನು ಆನಂದಿಸುವುದನ್ನು ಕವಿ ಅತ್ಯಂತ ಅರ್ಥಪೂರ್ಣವಾಗಿ ಇಲ್ಲಿ ಚಿತ್ರಿಸಿದ್ದಾರೆ. ಏಕೀಕರವೆಂಬುದು ಕೇವಲ ಹೋರಾಟವಾಗಿರದೆ ನಮ್ಮ ಭಾವನೆಗಳ ಭಾಗವಾಗಿ ಗೆದ್ದಿರುವ ಸಂದರ್ಭವನ್ನು ಏಕೀಕರಣದ ಸಾಧನೆಯ ಚಿತ್ರಣವನ್ನು ನಮ್ಮ ಮುಂದಿಡುವಂತೆ ಮಾಡುತ್ತದೆ. ಕನ್ನಡವನ್ನೇ ಬದುಕಾಗಿಸಿಕೊಂಡು ಮೊದಲ ಕವಿತೆಗಳ ಗುಚ್ಛ ಇಂಗ್ಲೀಷ್ ಭಾಷೆಯಲ್ಲಿ ಬರೆದಿದ್ದರೂ ಕವಿ ಕುವೆಂಪು ಅವರು ನಮ್ಮ ನಾಡಿನ ಸಾರ್ವಕಾಲಿಕೆ ಶ್ರೇಷ್ಠ ಕವಿಗಳಾಗಿ ಉಳಿದುಬಿಡುಲು ಕಾರಣ ಅವರ ಪ್ರಖರವಾದ ಚಿಂತನೆ ಹಾಗೂ ಬರವಣಿಗೆ. ಅವರ ಆಲೋಚನೆ "ವಿಶ್ವಮಾನವತ್ವದ" ನೆಲೆಯಲ್ಲಿ ಬೆಳೆದವು. ಆದರೆ ಅವರ ಭಾಷೆ ಹಾಗೂ ನಾಡಿನ

ವಿಚಾರದಲ್ಲಿ ಅತ್ಯಂತ ಸ್ಪಷ್ಟ ನಿಲುವನ್ನು ಹೊಂದಿದ್ದ ಬರಹಗಾರರು. ಹಾಗಾಗಿ ಅವರ ಅಧ್ಯಯನದ ಕಾಲದಿಂದಲೂ ಕನ್ನಡ ಹಾಗೂ ಕರ್ನಾಟಕದ ಬಗೆಗಿನ ಅವರ ಮನೋಭೂಮಿಕೆಯೇ ಅವರಿಂದ ನಮಗೆ ನಾಡಗೀತೆ, ರೈತಗೀತೆ, ವಿಶ್ವಮಾನವ ಗೀತೆಗಳಂತಹ ಕವಿತೆಗಳನ್ನು ಶಾಶ್ವತವಾಗಿ ಕೊಡುಗೆಯಾಗಿದ ನೀಡಿದೆ. ಏಕೀಕರಣ ಚಳುವಳಿಯು ಅವರಲ್ಲಿ ಮತ್ತೊಂದು ಆಯಾಮವನ್ನು ನಮ್ಮ ನಾಡಿಗೆ ಹಾಗೂ ಓದುಗ ಪ್ರಪಂಚಕ್ಕೆ ಪರಿಚಯಮಾಡಿಕೊಟ್ಟಿದೆ.

**ಗ್ರಂಥಋಣ**


1. ಸಮಗ್ರ ಕರ್ನಾಟಕದ ಇತಿಹಾಶ – ಕೆ.ಎನ್. ಅಶ್ವತ್ಥಪ್ಪ, ಸುಭಾಶ್ ಸ್ಟೋರ್ಸ್, ಬೆಂಗಳೂರು, 2017
2. ಕರ್ನಾಟಕ ಏಕೀಕರಣ ಇತಿಹಾಸ– ಡಾ. ಎಚ್.ಎಸ್. ಗೋಪಾಲ್ ರಾವ್, ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು–1, 2014
3. ಕುವೆಂಪು ಸಮಗ್ರ ಗದ್ಯ–ಸಂಪುಟ1, ಕುವೆಂಪು, ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ(ರಿ), ಕುಪ್ಪಳಿ
4. ಕುವೆಂಪು ಸಮಗ್ರ ಕಾವ್ಯ– ಕುವೆಂಪು, ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ(ರಿ), ಕುಪ್ಪಳಿ